ತಪ್ಪನ್ನು ತನ್ನ ಮೇಲೆಯೇ ಎಳೆದುಕೊಳ್ಳುತ್ತ 'ಟ್ರೈನು ಲೇಟು ಮಾರಾಯ' ಎಂದು ಇವನಂದುದನ್ನು ಕಿವಿಯ ಮೇಲೇ ಹಾಕಿಕೊಳ್ಳದೆ ಗೊಣಗಾಟ ಮುಂದುವರಿಸುತ್ತಿದ್ದರೇನೋ. ಅಷ್ಟರಲ್ಲಿ ನಸು ಬೆಳಕಿನಲ್ಲಿ ಹೆಣ ಭಾರದ ಗಂಟನ್ನು ಹೊರಲಾರದೆ ಹೊತ್ತುಕೊಂಡು ಬರುತ್ತಿದ್ದ ಕೆಲಸದವ ಕಾಣಿಸಿದಾಗ ಗೊಣಗಾಟ ನಿಂತಿತ್ತು ಮತ್ತು ಇವನನ್ನು ಮತ್ತು ಇವನ ಹೆಂಡತಿಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಎಲ್ಲರೂ ಕೆಲಸದವ ಕೆಳಗಿಳಿಸಿದ ಗಂಟಿಗೇ ಮುತ್ತಿದ್ದರು. ಕ್ಷಣಾರ್ಧದಲ್ಲಿ ಬಟ್ಟೆಯ ಗಂಟು ಖಾಲಿ. 'ಅದು ನನಗೆ, ಇದು ನಿನಗೆ, ಇದು ಅಮ್ಮನಿಗೆ ಚೆನ್ನಾಗಿ ಒಪ್ಪುತ್ತದೆ ಹೀಗಿದ್ದೇ ಇನ್ನೊಂದಿದ್ದರೆ ನಮ್ಮ ಮನೆಯವರಿಗೂ ಆಗುತ್ತಿತ್ತು' ಎಂದು ತಮ್ಮಲ್ಲೇ ಪಾಲು ಮಾಡಿಕೊಂಡ ಎಲ್ಲರೂ ತಮಗೆ ಇಷ್ಟ ಬಂದದ್ದನ್ನು ಮೈಮೇಲೆ ಹೆಗಲ ಮೇಲೆ ಹಾಕಿಕೊಂಡು ಚಂದ ನೋಡಿದ್ದೇನು... ಇನ್ನೊಬ್ಬರಿಗೆ ತೋರಿಸಿದ್ದೇನು... 'ನಿಮ್ಮದೇನಾದರೂ ಇದೆಯೇ ಇದರಲ್ಲಿ' ಎಂದು ಬಾಯಿ ತಪ್ಪಿ ಕೂಡ ಇವರಿಬ್ಬರನ್ನು ಕೇಳಿರಲಿಲ್ಲ ಯಾರೂ...

ಪ್ರಯಾಣದ ಆಯಾಸ ಪರಿಹರಿಸಿಕೊಳ್ಳುವ ಸಲುವಾಗಿ ಸ್ವಲ್ಪ ಕುಳಿತುಕೊಳ್ಳುವ ಎಂದು ತನ್ನ ಕೈಲಿದ್ದ ಚಿಕ್ಕ ಚೀಲವನ್ನು ಹಿಡಿದುಕೊಂಡ ಇವನ ಹೆಂಡತಿ ಒಳ ಹೋಗಿ ನೋಡಿದರೆ ಎಲ್ಲಿಂದ ಬಂದರೋ ಎಲ್ಲರೂ... 'ದೇವತಾ ಕಾರ್ಯಗಳೆಲ್ಲ ನಡೆಯಲಿಕ್ಕಿವೆ... ನೀನು ಒಳಗೆ ಹೋಗುವ ಹಾಗಿಲ್ಲ...' ಎಂದಿದ್ದರು. ಎತ್ತಿದ ಹೆಜ್ಜೆಯನ್ನು ಹಾಗೆಯೇ ಹಿಂದಕ್ಕಿಟ್ಟ ಅವಳು ಆರ್ತಳಾಗಿ ಗಂಡನೆಡೆಗೆ ನೋಡಿದರೆ ಅವ ಇನ್ನೆತ್ತಲೋ ನೋಡಿದ್ದ. 'ನಾನು ಬರುವುದಿಲ್ಲ ಎಂದರೂ ಕೇಳದೆ ಕರೆದುಕೊಂಡು ಬಂದಿರಿ ನೋಡಿ. ಈಗ ಏನು ಮಾಡಲಿ...' ಎನ್ನುವ ಮಾತು ಆಡದೆಯೇ ಅವಳ ಮುಖದಲ್ಲಿ ಸ್ಪಷ್ಟವಾಗಿದ್ದುದು ಅವನ ಗಮನಕ್ಕೆ ಬಂದಿತ್ತು.

ಅಲ್ಲೆಲ್ಲೋ ಹೊರಗಿನ ಒಂದು ಮೂಲೆಯಲ್ಲಿ ಕುಳಿತಿದ್ದಳು. ದೇವರ ದಯ. ವಿದ್ಯುತ್ ದೀಪವಿದ್ದುದರಿಂದ ಹುಳು ಹುಪ್ಪಟೆಗಳ ಭಯವಿರಲಿಲ್ಲ. ಇನ್ನು ಇಲ್ಲಿರುವವರೆಗೂ ಹೀಗೆಯೇ. ಅದೇನೂ ಹೊಸತಲ್ಲ ಅವರಿಗೆ. ಮದುವೆಯಾದ ಹೊಸತರಲ್ಲಿ ಇಬ್ಬರೂ ಕೂಡಿ ಅಪ್ಪ ಅಮ್ಮನ ಆಶೀರ್ವಾದ ಪಡೆಯಲು ಬಂದಾಗಲೂ ಇದೇ ಆಗಿತ್ತು. ಮದುವೆಯಾದ ನಂತರ ಮೊದಲ ಬಾರಿಗೆ ಹೋಗುತ್ತಿರುವುದಲ್ಲವೇ ಎಂದು ಆಗಲೂ ಹಿಗೇ ಎಲ್ಲರಿಗೂ ಉಡುಗೊರೆಗಳ ಹೊರೆಯನ್ನೇ ಹೊತ್ತುಕೊಂಡು ಬಂದಿದ್ದರು. ಯಾವುದೇ ಮುಲಾಜಿಲ್ಲದೆ ಅದನ್ನೆಲ್ಲ ತೆಗೆದುಕೊಂಡವರು ಆಕೆಯನ್ನು ಒಳಗೆ ಹೆಜ್ಜೆಯಿಡಲು ಮಾತ್ರ ಬಿಟ್ಟಿರಲಿಲ್ಲ. 'ಆಕೆ ಮಾಂಸ ಮಡ್ಡಿ ತಿನ್ನುವುದಿಲ್ಲ, ನಮ್ಮ ಹಾಗೆಯೇ ಪೂಜೆ ಪುನಸ್ಕಾರ ಎಲ್ಲ ಮಾಡುತ್ತಾಳೆ' ಎಂದರೆ ಯಾರೂ ಕಿವಿಯ ಮೇಲೇ ಹಾಕಿಕೊಂಡಿರಲಿಲ್ಲ. ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದ ಅಪ್ಪ ಕಿರೀ ಮಗನೆಂಬ ಪ್ರೀತಿಯಿಂದ ಎಲ್ಲಿಯಾದರೂ ಒಳಗೆ ಕರೆದುಕೊಳ್ಳುತ್ತಾನೇನೋ ಎನ್ನುವ ಭಯದಿಂದ ಅವರನ್ನು ಎದುರಿಗೆ ಬರಲಿಕ್ಕೇ ಬಿಟ್ಟಿರಲಿಲ್ಲ ಅಣ್ಣಂದಿರು. ಚಾವಡಿಯ ಮೇಲೆ ಕುಳಿತ ಅಪ್ಪ ಎರಡು ಅಸಹಾಯಕ ಕಣ್ಣುಗಳಿಂದ ಪಿಳಿ ಪಿಳಿ ನೋಡುವುದು ಮಾತ್ರ ಕಾಣಿಸಿತ್ತು. ಆಗಲೂ ಹೀಗೆಯೇ. ಹೊರಗಡೆಯೇ ಕುಳಿತು ಮಲಗಿ ಎರಡು ದಿನ ಕಳೆದು ಹೊರಟಿದ್ದರು. ಅವನಿಗೂ ಒಳ ಬರುವ ಮುನ್ನ ಜನಿವಾರ ಬದಲಾಯಿಸಿ ಪಂಚಗವ್ಯ ಸೇವಿಸಿ ಬರಬೇಕೆಂದು ತಾಕೀತು ಮಾಡಿದ ಮಂದಿ ಆ ಎರಡು ದಿನ ತಪ್ಪಿಯೂ ಹೆಂಡತಿಯನ್ನು ಮುಟ್ಟಿಸಿಕೊಳ್ಳಬಾರದೆಂದಿದ್ದರು. ಅದೇ ನೆನಪಿನಲ್ಲಿದ್ದ ಆಕೆ ಈಗ ಬರುವುದಿಲ್ಲ ಎಂದದ್ದು. 'ಸಮಯ ಬದಲಾಗಿದೆ ಅಣ್ಣಂದಿರೆಲ್ಲರೂ ಬದಲಾಗಿದ್ದಾರೆ... ಅವರ ಮಕ್ಕಳೂ ಬೆಳೆದಿದ್ದಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವಿದೇಶಕ್ಕೂ ಹೋಗಿ ಬಂದಿದ್ದಾರೆ. ಅಂತಹದೆಲ್ಲ ಇರಲಿಕ್ಕಿಲ್ಲ' ಎಂದು ಪೂಸಿ ಹೊಡೆದು ಕರೆದುಕೊಂಡು ಬಂದಿದ್ದ